# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 2357 |
| ಸದಸ್ಯರ ಹೆಸರು | ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 27.03.2026 |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ರಾಜ್ಯದ ಜನಸಂಖ್ಯೆಯ, ಸಾಮಾಜಿಕ ಶೈಕ್ಷಣಿಕ, ಆರ್ಥಿಕ ಮತ್ತು ರಾಜಕೀಯ ಸ್ಥಿತಿಗಳನ್ನು ನಿಖರವಾದ ದಾಖಲಿಸುವ ಉದ್ದೇಶದಿಂದ 2025 ರ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ಯಾವ ದಿನಾಂಕ ದಂದು ಪ್ರಾರಂಭಿಸಲಾಗಿದೆ; ಮತ್ತು ಯಾವ ದಿನಾಂಕದಂದು ಮುಕ್ತಾಯಗೊಳಿಸಲಾಗಿದೆ; ಸಮೀಕ್ಷೆಯ ಮೂಲ ಉದ್ದೇಶವೇನು; ಮೂಲ ಉದ್ದೇಶ ಈಡೇರಿದೆಯೇ;<br>(ಸಂಪೂರ್ಣ ವಿವರ ನೀಡುವುದು ) | ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ನಡೆಸಿದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ-2025ನ್ನು ರಾಜ್ಯದ್ಯಾಂತ ದಿನಾಂಕ:22-09-2025 ರಿಂದ 31-10-2025ರ ವರೆಗೆ ನಡೆಸಲಾಗಿದೆ.<br><br>ಈ ಸಮೀಕ್ಷೆಯಲ್ಲಿ ಪ್ರತಿ ಕುಟುಂಬದ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗಳ ಬಗ್ಗೆ 60 ಮಾನದಂಡಗಳನ್ನು ಒಳಗೊಂಡ ಮಾಹಿತಿಯನ್ನು ಸಂಗ್ರಹಿಸಲಾಗಿರುತ್ತದೆ. |
| ಆ) | ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ರಾಜ್ಯ ಸರ್ಕಾರವು ಎಷ್ಟು ಮೊತ್ತವನ್ನು ಮೀಸಲಿರಿಸಿದೆ ಹಾಗೂ ಬಿಡುಗಡೆಗೊಳಿಸಿದೆ, ಎಷ್ಟು ಮೊತ್ತವನ್ನು ಯಾವ ಕಾರಣಕ್ಕಾಗಿ ಯಾವ ಉದ್ದೇಶಕ್ಕಾಗಿ ವೆಚ್ಚ ಮಾಡಲಾಗಿದೆ; ಎಷ್ಟು ಮೊತ್ತವನ್ನು ಯಾವ ದಿನಾಂಕದಂದು ಯಾರಿಗೆ / ಸಂಸ್ಥೆ/ ಕಂಪನಿ / ಇನ್ನಿತರರಿಗೆ ಪಾವತಿಸಲಾಗಿದೆ; (ಸಂಪೂರ್ಣ ವಿವರ ನೀಡುವುದು); | ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ-2025ಕ್ಕೆ ಒಟ್ಟು ರೂ.348.36 ಕೋಟಿಗಳನ್ನು ಒದಗಿಸಲಾಗಿದೆ. ಸಮೀಕ್ಷಾದಾರರು ಮತ್ತು ಮೇಲ್ವಿಚಾರಕರ ಗೌರವಧನ, ಮುದ್ರಣ ವೆಚ್ಚ, EDCS ಶುಲ್ಕ ಹಾಗೂ ಇತ್ಯಾದಿಗಳು ಸೇರಿ ಸಮೀಕ್ಷೆಗೆ ಇದುವರೆಗೂ ಒಟ್ಟು ರೂ.250.66 ಕೋಟಿ ವೆಚ್ಚವಾಗಿರುತ್ತದೆ. |
| ಇ) | ರಾಜ್ಯ ಸರ್ಕಾರವು ನೂರಾರು ಕೋಟಿ ತೆರಿಗೆ ಹಣದಿಂದ ಸಮೀಕ್ಷೆಯನ್ನು ಕೈಗೊಂಡಿದೆ ಎಂಬ ವಿಷಯ ಪತ್ರಿಕೆಗಳಲ್ಲಿ ಪ್ರಕಟಗೊಂಡಿದೆ, ಆದರೆ ಸಮೀಕ್ಷೆ ಪೂರ್ಣಗೊಳಿಸಿ ಹಲವು ತಿಂಗಳು ಕಳೆದರೂ ವರದಿಯನ್ನು ಒಪ್ಪಿಸದೇ ಇರುವುದು ಹಾಗೂ ಅದು ಜಾರಿಗೆ ಬರದೇ ಇರುವುದು ಸರ್ಕಾರದ | ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ನಡೆಸಿದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ-2025ರ ವರದಿ ಸಿದ್ಧಪಡಿಸುವ ಕಾರ್ಯ ಪ್ರಗತಿಯಲ್ಲಿದೆ. |

<table>
<tr><td></td><td>ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ / ತೆಗೆದುಕೊಳ್ಳುವ ಕ್ರಮಗಳೇನು; ಜಾರಿಗೊಳಿಸಲು ಯಾಕೆ ವಿಳಂಬ ನೀತಿಯನ್ನು ಅನುಸರಿಸಲಾಗುತ್ತಿದೆ; (ಸಂಪೂರ್ಣ ಮಾಹಿತಿ ನೀಡುವುದು)</td><td></td></tr>
<tr><td>ಈ)</td><td>ಸದರಿ ಸಾಮಾಜಿಕ ಮತ್ತು ಶೈಕ್ಷಣಿಕೆ ಸಮೀಕ್ಷೆಯಲ್ಲಿ ಕಾರ್ಯನಿರ್ವಹಿಸಿದ ನೌಕರರಿಗೆ ಗೌರವ ಧನವನ್ನು ಪಾವತಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ತೆಗೆದುಕೊಂಡ ಕ್ರಮಗಳೇನು; ಸಮೀಕ್ಷೆಯಲ್ಲಿ ಭಾಗವಹಿಸಿದ ನೌಕರರಿಗೆ ಯಾವ ರೀತಿಯ ಗೌರವ ಧನವನ್ನು ಸರ್ಕಾರವು ನೀಡಲು ತೀರ್ಮಾನಿಸಿದೆ; ನೀಡಿದ್ದರೆ ಮಾಹಿತಿ ನೀಡುವುದು?</td><td>ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷಾ ಕಾರ್ಯದಲ್ಲಿ ಪಾಲ್ಗೊಂಡಿದ್ದ ಪ್ರತಿಯೊಬ್ಬ ಸಮೀಕ್ಷಾದಾರರಿಗೆ Lump-sum ರೂ.5000/- ಹಾಗೂ ಪ್ರತಿ ಮನೆಯ ಸಮೀಕ್ಷೆಗೆ ರೂ.100/- ರಂತೆ ಪಾವತಿಸಲು ಆದೇಶಿಸಲಾಗಿದೆ.<br><br>ಅದರಂತೆ, ಅಧಿಕಾರಿ / ನೌಕರರಿಗೆ ಗೌರವಧನವನ್ನು ಪಾವತಿಸಲು 31 ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಮತ್ತು GBA ಮುಖ್ಯ ಆಯುಕ್ತರಿಗೆ ಈ ಕೆಳಗಿನ ದಿನಾಂಕಗಳಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.
<table>
<tr><th>ಕ್ರ. ಸಂ</th><th>ವಿವರ</th><th>ದಿನಾಂಕ</th></tr>
<tr><td>1</td><td>31 ಜಿಲ್ಲೆಗಳು</td><td>26.09.2025<br>ಮತ್ತು<br>06.11.2025</td></tr>
<tr><td>2</td><td>ಗ್ರೇಟರ್ ಬೆಂಗಳೂರು ಪ್ರಾಧಿಕಾರ</td><td>17.10.2025<br>ಮತ್ತು<br>18.11.2025</td></tr>
</table>
</td></tr>
</table>

**ಸಂಖ್ಯೆ: ಹಿಂವಕ** 112 **ಬಿಸಿಎ** 2026

**(ಶಿವರಾಜ .ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು